ಹಾಕಿದ್ದೇವೆ, ಆದರಿಂದ ಸರ್ಕಾರಕ್ಕೆ ಎಷ್ಟು ಉತ್ಪತ್ತಿ ಬರುತ್ತಿದೆ ಎಂಬುದಕ್ಕೆ ಲೆಕ್ಕ ಬೇಡವೇ? ಒಂದು ಟ್ರೆಂಚ್ ಹೊಡೆಸುವುದಕ್ಕೆ ೨-೩ ರೂಪಾಯಿಗಳನ್ನು ಕೆ ಇಡುತ್ತೀರಿ ಮತ್ತು ಆದನ್ನೆಲ್ಲ ಲೆಕ್ಕ ಇಡುತ್ತೀರಿ; ಅದೇ ರೀತಿ ಇದನ್ನು ಲೆಕ್ಕ ಹಾಕಿ ಹೇಳುವುದಕ್ಕೆ ಬರುವುದಿಲ್ಲವೆ?

ಶ್ರೀ ಜಿ. ರಾಮೇಗೌಡ.—ಅರಣ್ಯದಲ್ಲಿ ೩೦-೨೦-೧೦-೮-೬-೪ ಅಡಿಗಳ ಸ್ಪೇಸಿಂಗ್ ಬಿಟ್ಟು ಗಿಡ ಗಳನ್ನು ಹಾಕಿದ್ದೇವೆ. ಆದ್ದರಿಂದ ಮರ ಕಡಿದಾಗ ತೂಕದ ಮೇಲೆ ಆದಾಯ ಎಷ್ಟು ಎಂದು ಹೇಳಬಹುದೇ ಹೊರತು ಈಗ ಇಂತಿಂಥ ಮರಗಳಿವೆ. ಅವುಗಳಿಂದ ಇಷ್ಟಿಷ್ಟು ಆದಾಯ ಬರುತ್ತ ದೆಂದು ಅವುಗಳನ್ನು ಎಣಿಕೆ ಮಾಡಿ ಕಂಡುಹಿಡಿಯುವುದಕ್ಕೆ ಆಗುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಗಂಧದ ಮರಗಳ ಪ್ರಶ್ನೆ ಉದ್ಭವಿಸಿರುವುದು ತುಮಕೂರು ಜಿಲ್ಲೆ ಯಲ್ಲಿ; ಅಲ್ಲಿ ದಿನಕ್ಕೆ ೨-೩ ಲಾರಿಗಳು ಹೋಗುತ್ತಿವೆ. ಸರ್ಕಾರದವರು ದುಡ್ಡು ಖರ್ಚು ಮಾಡಿ ಸ್ಮಗ್ಲರ್ಸ್‌ಗೆ ಎನ್‌ಕರೇಜ್ ಕೊಡುತ್ತಿದ್ದಾರೆಂದು ಹೇಳಬೇಕಾಗುತ್ತದೆ ತಾವು ಹೇಳುವ ಉತ್ತರದ ಪ್ರಕಾರ. ೧೯೬೯–೭೦ ರಿಂದ ಎಷ್ಟು ಹಣ ಖರ್ಚು ಮಾಡಿದ್ದೀರಿ ಆದರಿಂದ ಸರ್ಕಾರಕ್ಕೆ ಬರತಕ್ಕ ಅಂದಾಜು ಆದಾಯ ಎಷ್ಟು; ಹಾಗೂ ಅಲ್ಲಿರತಕ್ಕ ಗಂಧದ ಮರಗಳು ಎಷ್ಟು, ಹೊನ್ನೆ ಮರಗಳು ಎಷ್ಟು,ನೀಲಗಿರಿ ಮರಗಳು ಎಷ್ಟು ಎಂದು ಲೆಕ್ಕ ಮಾಡಿ ಹೇಳುವುದಕ್ಕೆ ಆಗದೆ ಹೋದರೆ, ಅಲ್ಲಿ ಲೂಟಿ ಎಷ್ಟು ಆಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಜಿ. ರಾಮೇಗೌಡ.—ಅಲ್ಲಿ ಗಂಧದ ಮರಗಳು ಕಳವು ಆಗುತ್ತಿದೆ ಎಂಬುದು ನನಗೂ ಗೊತ್ತಿದೆ. ಅದಕ್ಕೆ ಅವರಿವರು ಸಹಾಯ ಮಾಡಿದರೆ ಕಳ್ಳತನ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದಾಯ ಎಷ್ಟು ಬರುತ್ತದೆಂಬುದನ್ನು ಮಾತ್ರ ಮರ ಕಡಿದಾಗ ತೂಕ ಹಾಕಿದ ಮೇಲೆ ಹೇಳಬಹುದು. ನೀಲಗಿರಿ ಮರಗಳನ್ನು ೯-೧೦ ವರ್ಷಕ್ಕೆಲ್ಲ, ಹಾಗೂ ಟೀಕ್ ಮರಗಳನ್ನು ೧೦೦ ವರ್ಷಕ್ಕೆ–ಅವಸರ ಬಂದರೆ ೭೦–೮೦ ವರ್ಷಕ್ಕೆ ಕಡಿಯುತ್ತೇವೆ. ಆದರಿಂದ, ಮರಗಳನ್ನು ಎಣಿಸಿ ಬೆಲೆ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಡಿ. ಟಿ. ಮಾಯಣ್ಣ.—ಹುಲಿಯೂರುದುರ್ಗ ಪೋಲೀಸ್ ಸ್ಟೇಷನ್‌ನಲ್ಲಿ ಕೇಸ್ ಹಾಕಿರು ವಾಗ ಅಲ್ಲಿ ಹೆಚ್ಚಾಗಿ ಗಂಧದ ಮರಗಳು ಕಳವು ಆಗಿವೆ ಎಂಬುದು ಗೊತ್ತಾಗುವುದಿಲ್ಲವೆ?

ಶ್ರೀ ಜಿ. ರಾಮೇಗೌಡ.—ಪೋಲೀಸ್ ಸ್ಟೇಷನ್‌ನಲ್ಲಿ ಹಿಡಿಸಿ ಇಟ್ಟಿರುವ ಮರಗಳು ಎಲ್ಲಿ ಕಡಿದವು ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಕಡಿದವನು ಒಪ್ಪುವವರೆಗೆ ವಿವರ ಸಿಗುವುದಿಲ್ಲ.

Government and Private Primary Schools in Raichur District.

1006 SRI M. GANGANNA (Kustagi).—Will the Minister for Education be pleased to state:—

(*a*) the Number of Government and private Primary Schools in Raichur District;

(*b*) the number of teachers working in the said schools;

(*c*) the required strength of teachers in this District;

(*d*) the number of Primary School Teachers belonging to Harijan, Girijan, Backward Class and Minority Communities;

(*e*) the number of teacher selected by the District Teachers' Selection Committee of Raichur; whether it is a fact that some irregularities have taken place in the selection, if so, the action taken by the Government in this behalf;

(*f*) whether it is not a fact that injustice has been done to the youths of this District in selection of teachers?

SRI B. SUBBAYYA SHETTY (Minister for Education).—

(*a*)—

Government Schools	Private Schools	Total
1444	16	1460

(*b*)—

Government Schools	Private Schools	Total
3710	149	3859

(*c*) There is no need for appointment of additional teachers.

(*d*)—

Reserved Posts	Harijan	Girijan	Backward Class	Backward Caste	Backward Community	Special Group
–	335	70	127	82	27	23
165	177	36	127	62	27	23

(*e*) Selection of Teachers is done as per rules and no irregularities have taken place. Therefore the question of taking any action does not arise.

(*f*) The Question of injustice to the youths of this District does not arise as the selection is made as per rules.

ಶ್ರೀ ಎಂ. ಗಂಗಣ್ಣ.—ತಮ್ಮ ಉತ್ತರದಲ್ಲಿ ೧೪೪೪ ಸರ್ಕಾರಿ ಶಾಲೆಗಳಲ್ಲಿ ೩೭೧೦ ಮಂದಿ ಉಪಾಧ್ಯಾಯರಿದ್ದಾರೆಂದು ಹೇಳಿದ್ದೀರಿ ೧೯೭೫ರ ಅಂಕಿ ಅಂಶಗಳ ಪ್ರಕಾರ ಒಂದು ಲಕ್ಷದ ೨೩ ಸಾವಿರ ವಿದ್ಯಾರ್ಥಿಗಳಿದ್ದರು ಈಗ ಇನ್ನೂ ಜಾಸ್ತಿಯಾಗಿರಬೇಕು ಆಗಲೇ ಅದಕ್ಕೆ ಸರಿಯಾದ ಪ್ರಮಾಣದಲ್ಲಿ ಉಪಾಧ್ಯಾಯರುಗಳ ಸಂಖ್ಯೆ ಕಡಿಮೆ ಇತ್ತು. ಆದರೂ ಕೂಡ ತಾವು ಹೆಚ್ಚಿನ ಶಿಕ್ಷಕರ ಅವಶ್ಯಕತೆ ಇಲ್ಲವೆಂದು ಹೇಳಿದ್ದೀರಿ (ಈ) ಪ್ರಶ್ನೆಗೆ ಉತ್ತರವಾಗಿ ಕಾಯ್ದಿರಿಸದ ಎಂಬುದರ ಕೆಳಗೆ ನಿಲ್ ಎಂದು ತೋರಿಸಿದ್ದೀರಿ. ಮತ್ತು ಅದರ ಕೆಳಗೆ ೧೬೫ ಎಂದು ತೋರಿಸಿದ್ದೀರಿ, ಅದು ಏನು ಎಂದು ತಿಳಿಯಲಿಲ್ಲ.

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.—(ಇ) ಪ್ರಶ್ನೆಗೆ ಉತ್ತರವಾಗಿ ಹೆಚ್ಚಿನ ಶಿಕ್ಷಕರ ಅವಶ್ಯಕತೆ ಇರುವುದಿಲ್ಲವೆಂದು ಹೇಳಿದ್ದೇವೆ. ಇದು ಅಪ್ರೂವ್ ಆಗುವಾಗ ಆ ರೀತಿ ಇತ್ತು. ಈಗ ೩೧ನೇ ಮಾರ್ಚ್ ೧೯೭೯ರ ಲೆಕ್ಕದ ಪ್ರಕಾರ ಕನ್ನಡ ಶಿಕ್ಷಕರು ೨೩೦, ಉರ್ದು ಶಿಕ್ಷಕರು ೨, ಫಿಸಿಕಲ್ ಇನ್‌ಸ್ಟ್ರಕ್ಟರ್ಸ್ ೧೧, ತೆಲುಗು ಶಿಕ್ಷಕರು ೧೩, ತಮಿಳು ಶಿಕ್ಷಕರು ೩, ಹಿಂದಿ ಶಿಕ್ಷಕರು ೯, ಹೀಗೆ ಒಟ್ಟು ೨೬೮ ಮಂದಿ ಶಿಕ್ಷಕರು ಇನ್ನೂ ಬೇಕಾಗಿದ್ದಾರೆ. ಇನ್ನು (ಈ) ಪ್ರಶ್ನೆಯಲ್ಲಿ ಪ್ರಿಂಟಿಂಗ್ ಮಿಸ್ಟೇಕ್ ಆಗಿದೆ, ಅದು ಕಾಯ್ದಿರಿಸಿದೆ ಎಂದು ಇರಬೇಕು.

ಶ್ರೀ ಎಂ. ಗಂಗಣ್ಣ.—ಹಿಂದುಳಿದ ಜನಾಂಗದವರು ೧೨೭ ಎಂದು ಹೇಳಿದ್ದೀರಿ. ಆದರೆ ಹಾವನೂರ್ ವರದಿಯ ಪ್ರಕಾರ ಹಿಂದುಳಿದ ಜನಾಂಗದವರು ಎಂದರೆ ಹಿಂದುಳಿದ ಜಾತಿ–ಜನಾಂಗ–ಪಂಗಡ–ವಿಶೇಷ ವರ್ಗ ಇದೆಲ್ಲ ಬರುತ್ತದೆ. ಆದ್ದರಿಂದ ತಾವು ಹಿಂದುಳಿದ ಜನಾಂಗಕ್ಕೆ ೧೨೭ ಎಂದು ಹೇಳಿರುವುದು ಏನು ಎಂದು ತಿಳಿಯಲಿಲ್ಲ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—೧೯೭೮-೭೯ರಲ್ಲಿ ೬೪೩ ಮಂದಿ ಪ್ರಾಥಮಿಕ ಶಾಲಾ ಉಪಾಧ್ಯಾಯರು ಗಳನ್ನು ರೆಕ್ರೂಟ್ ಮಾಡಿದ್ದೇವೆ. ಅದರ ಕಮ್ಯುನಿಟಿವೈಸ್ ಡೀಟೈಲ್ಸ್ ಇದೆ. ಮಾನ್ಯ ಸದಸ್ಯರಿಗೆ ಅದು ಬೇಕಾದರೆ ಕಳುಹಿಸಿಕೊಡಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ಗಂಗಣ್ಣ.—ಸರ್ಕಾರಿ ಶಾಲೆಗಳಲ್ಲಿರತಕ್ಕ ೩೭೧೦ ಮಂದಿ ಉಪಾಧ್ಯಾಯರುಗಳ ಪೈಕಿ ಎಷ್ಟೆಷ್ಟು ಮಂದಿ ಯಾವ ಯಾವ ವರ್ಗಗಳಿಗೆ ಸೇರಿದವರಾಗಿದ್ದಾರೆಂಬ ವಿವರ ಇಲ್ಲ. ಎರಡನೆಯದಾಗಿ ಹಿಂದುಳಿದ ಜನಾಂಗ ಎಂದರೆ ಏನು ಎಂದು ತಿಳಿಯುಲಿಲ್ಲ. ಹಾಪನೂರ್ ವರದಿಯಲ್ಲಿ ೪ ವರ್ಗಗಳನ್ನು ಕೂಡಿಸಿ ಹಿಂದುಳಿದ ಜನಾಂಗ ಎಂದು ಮಾಡಿದ್ದಾರೆ.

SRI B. SUBBAYYA SHETTY.—We have given break-up figures. If the hon. Member wants more details I can supply.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ನನ್ನ (ಉ) ಪ್ರಶ್ನೆಗೆ ಉತ್ತರವಾಗಿ ಶಿಕ್ಷಕರ ಆಯ್ಕೆಯಲ್ಲಿ ಯಾವ ಅಕ್ರಮವೂ ನಡೆದಿರುವುದಿಲ್ಲವೆಂದು ತಾವು ಹೇಳಿದ್ದೀರಿ. ಆದರೆ ಶಿಕ್ಷಕರ ಆಯ್ಕೆಯಲ್ಲಿ ಅಕ್ರಮ ನಡೆದಿರು ವುದರ ಬಗ್ಗೆ ನನ್ನಲ್ಲಿ ಲಿಸ್ಟ್ ಇದೆ. ಅದನ್ನು ತಮ್ಮ ಕಡೆಗೆ ಕಳಿಸಿಕೊಡುತ್ತೇನೆ. ತಾವು ಈ ಬಗ್ಗೆ ತಕ್ಕ ಕ್ರಮ ಕೈಕೊಳ್ಳುತ್ತೀರಾ?

೧೨–೩೦ ಪಿ.ಎಂ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಸ್ವಾಮಿ, ಮಾನ್ಯ ಸದಸ್ಯರಲ್ಲಿ ಅಂತಹ ಇನ್‌ಸ್ಟೆನ್ಸಸ್ ಇದ್ದರೆ, ಅದನ್ನು ನನಗೆ ಪಾಸ್–ಆನ್ ಮಾಡಿದರೆ ಅದನ್ನು ಪರಿಶೀಲನೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಶಿಕ್ಷಕರ ಆಯ್ಕೆಯಲ್ಲಿ ಶಿಕ್ಷಕರಿಗೆ ಅನ್ಯಾಯವಾಗಿದೆ. ಎಂದು ಹೇಳಿದ್ದಾರೆ. ಆದರೆ ನಮಗೆ ಏನು ಕಂಡು ಬಂದಿದೆ ಎಂದರೆ ಡಿ.ಎಲ್.ಆರ್.ಸಿ. ಯವರು ಜಿಲ್ಲಾವಾರು ರೆಕ್ರೂಟ್‌ಮೆಂಟ್ ಮಾಡುವಾಗ ಎಲ್ಲಾ ಜಿಲ್ಲೆಗಳಿಂದ ಬಂದಂತಹ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಅಂತಹ ಅಭ್ಯರ್ಥಿಗಳು ಕೆಲವಾರು ತಿಂಗಳು ಅಲ್ಲಿ ಕೆಲಸಮಾಡಿ ಅನಂತರ ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋಗುತ್ತಿದ್ದಾರೆ. ಇದರಿಂದ ಅಲ್ಲಿ ಶಿಕ್ಷಕರ ಪೋಸ್ಟ್‌ಗಳು ಖಾಲಿಯಾಗುತ್ತಿರುತ್ತವೆ. ಇದರಲ್ಲಿ ಆ ಜಿಲ್ಲೆಯವರಿಗೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕು ಎಂದು ಹೇಳಿದ್ದೇವೆ, ಹಾಗೂ ಡಿ.ಎಲ್.ಆರ್.ಸಿ ಕಮಿಟಿಯವರು ಅಭ್ಯರ್ಥಿ ಗಳನ್ನು ಆಯ್ಕೆ ಮಾಡಿದಮೇಲೆ ಆ ಶಿಕ್ಷಕರು ೧೦ ವರ್ಷಗಳವರೆಗೆ ಆ ಜಿಲ್ಲೆಯಲ್ಲಿ ಕೆಲಸಮಾಡಬೇಕು. ಅಲ್ಲಿಯವರೆಗೆ ಅವರನ್ನು ಬೇರೆಕಡೆಗೆ ಟ್ರಾನ್ಸ್‌ಫರ್ ಮಾಡಕೂಡದು ಎಂದು ಸರ್ಕಾರ ಆಜ್ಞೆಯನ್ನು ಹೊರಡಿಸಿದೆ.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ನಮ್ಮ ರಾಯಚೂರಿನ ಜಿಲ್ಲೆಯಿಲ್ಲಿರುವ ಸರಕಾರಿ ಹಾಗೂ ಖಾಸಗೀ ಪ್ರಾಥಮಿಕ ಶಾಲೆಗಳಲ್ಲಿ ಮಹಾರಾಷ್ಟ್ರದಿಂದ ಬಂದಿರತಕ್ಕಂಥ ಟೀಚರ್‌ಗಳನ್ನು, ಆಂಧ್ರದಿಂದ ಬಂದಿರತಕ್ಕಂಥ ಟೀಚರ್‌ಗಳನ್ನು ಉರ್ದು, ತೆಲುಗು ಟೀಚರ್‌ಗಳಾಗಿ ಅಪಾಯಿಂಟ್ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿರತಕ್ಕಂಥವರಿಗೆ ಇದರಿಂದ ಅನ್ಯಾಯವಾಗಿದೆ. ಈ ಶಾಲೆಗಳಲ್ಲಿ ಅರ್ಧದಷ್ಟು ನಮ್ಮ ಜಿಲ್ಲೆಗೆ ಸೇರಿದಂಥ ಟೀಚರ್‌ಗಳು ಇಲ್ಲ. ಈ ಬಗ್ಗೆ ನಮ್ಮ ಜಿಲ್ಲೆಯ ಟೀಚರ್‌ಗಳಿಗೆ ನ್ಯಾಯ ದೊರಕಿಸಿ ಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಮಾನ್ಯ ಸದಸ್ಯರು ಕೇಳುವುದಕ್ಕಿಂತ ಮುಂಚೆ ನಾನೇ ಇದಕ್ಕೆ ಉತ್ತರ ಹೇಳಿದ್ದೇನೆ. ಒಂದು ಜಿಲ್ಲೆಯಲ್ಲಿ ಶಿಕ್ಷಕರನ್ನು ರೆಕ್ರೂಟ್‌ಮೆಂಟ್ ಮಾಡುವಾಗ ಬೇರೆ ಜಿಲ್ಲೆಯವರು ಬರಬಾರದು ಎಂದು ಹೇಳುವ ಅಧಿಕಾರ ನಮಗೆ ಇಲ್ಲ. ಯಾರ್ಯಾರು ಅಲ್ಲಿಗೆ ಬಂದು ಅರ್ಜಿ ಮಾಡಿ, ಅವರು ಅರ್ಹರು ಎಂದು ಕಂಡು ಬಂದಪಕ್ಷದಲ್ಲಿ ರೆಕ್ರೂಟ್‌ಮೆಂಟ್ ಕಮಿಟಿಯವರು ಅವರನ್ನು ರೆಕ್ರೂಟ್‌ಮೆಂಟ್ ಮಾಡಬಹುದು ಎಂದು ಇದೆ. ನಮಗೆ ಏನು ಕಂಡು ಬಂದಿದೆ ಎಂದರೆ ಕೆಲವರು ಅಲ್ಲಿ ರೆಕ್ರೂಟ್‌ಮೆಂಟ್ ಆದಮೇಲೆ ಕೆಲವು ತಿಂಗಳುಗಳ ನಂತರ ಅಲ್ಲಿಂದ ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋಗುತ್ತಾರೆ. ಇದರಿಂದ ಅಲ್ಲಿ ವೇಕೆನ್ಸಿ ಕ್ರಿಯೇಟ್ ಆಗುತ್ತದೆ. ಆ ಜಿಲ್ಲೆಯವರಿಗೂ ಸಹ ಆ ಅವಕಾಶ ತಪ್ಪಿಹೋಗುತ್ತದೆ. ನಾವು ಈಗ ಏನು ಮಾಡಿದ್ದೇವೆ ಎಂದರೆ ಅಲ್ಲಿ ಕೆಲವರನ್ನು ರೆಕ್ರೂಟ್‌ಮೆಂಟ್ ಮಾಡಿದಮೇಲೆ ೧೦ ವರ್ಷದವರೆಗೂ ಅವರನ್ನು ಟ್ರಾನ್ಸ್‌ಫರ್ ಮಾಡಬಾರದು ಎಂದು ಆಜ್ಞೆ ಮಾಡಿದ್ದೇವೆ. ಇದರಿಂದ ಎರಡು ರೀತಿಯಲ್ಲಿ ಅನುಕೂಲವಾಗುತ್ತದೆ. ಒಂದು ಸಾರಿ ಅಭ್ಯರ್ಥಿ

ಗಳು ಶಿಕ್ಷಕರಾಗಿ ನೇಮಕ ಹೊಂದಿದಮೇಲೆ ಆ ಜಿಲ್ಲೆಯಿಂದ ಹೊರಗೆ ಹೋಗುವುದಕ್ಕೆ ಬರುವುದಿಲ್ಲ. ಆಲ್ಲಿ ವೇಕೆನ್ಸಿ ಪುನಃ ಕ್ರಿಯೇಟ್ ಆಗುವುದಿಲ್ಲ, ಹೊಸದಾಗಿ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದಾಗ ಆ ಜಿಲ್ಲೆಯವರಿಗೆ ಹೆಚ್ಚು ಅವಕಾಶಗಳು ಸಿಕ್ಕುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ಗಂಗಣ್ಣ.—ಸ್ವಾಮಿ, ಇನ್ನೊಂದು ವಿಚಾರವೇನೆಂದರೆ ರಾಯಚೂರು ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಮಹಾರಾಷ್ಟ್ರದವರು, ಆಂಧ್ರದವರು, ಹೆಚ್ಚಾಗಿ ಸೇರಿದ್ದಾರೆ. ಇದರಿಂದ ನಮ್ಮ ರಾಜ್ಯದವರಿಗೆ ಅನ್ಯಾಯವಾಗಿದೆ. ಇದನ್ನು ತಪ್ಪಿಸುತ್ತೀರಾ?

ಶ್ರೀ ಬಿ. ಸುಬ್ಬಯ್ಯಕೆಟ್ಟಿ.—ಅಲ್ಲಿ ಯಾರ್ಯಾರು ಸೇರಿದ್ದಾರೆ ಎಂಬುದರ ಬಗ್ಗೆ ನಾನು ತನಿಖೆ ನಡೆಸುತ್ತೇನೆ.

Financial Assistance to the Physically handicapped persons in Yelburga Taluk.

270 SRI LINGARAJ SHIVASHANKARARAO DESAI (Yelburga) —Will the Minister of State for Women and Children's Welfare be pleased to state:—

(a) the number of Physically handicapped persons who have been granted financial assistance or Scholarships, in Yelburga Taluk, Raichur District;

(b) the number of applications received for such Assistance;

(c) the amount spent on these items during the current financial year as upto the end of November 1978?

SMT. MANORAMA MADHVARAJ (Minister of State for Women and Childern's Welfare).—

(a)—

(i) Scholarship	...	Nil
(ii) Financial Assistance to Physically handicapped persons	...	4

(b)—

(i) Scholarship	...	Nil
(ii) Financial Assistance	...	4

(c)—

(i) (a) State Government Scholarship	...	Rs. 5,38,695
(b) Government of India Scholarship	...	Rs. 4,58,298

(ii) Rs. 11,41,963-80 has been spent on Financial Assisance to Physically handicapped persons upto the end of February 1979.

ಶ್ರೀ ಎಲ್. ಎಸ್. ದೇಸಾಯಿ —ಸ್ವಾಮಿ, ತಾವು ಅಂಗವಿಕಲರಿಗೆ ಸಹಾಯ ಮಾಡಬೇಕು ಎಂದು ಹೇಳಿ ಅನೇಕ ಯೋಜನೆಗಳನ್ನು ಹಾಕಿದ್ದೀರಿ ಅಂಗವಿಕಲರಾದವರಿಗೆ ಓಲ್ಡ್ ಏಜ್ ಪೆನ್‌ಷನ್ ಕೊಡುವುದು ಹಾಗು ಅಂಗವಿಕಲರಾದ ನಿರುದ್ಯೋಗಿ ಪದವೀಧರರಿಗೆ ಹಣ ಸಹಾಯ ಮಾಡತಕ್ಕಂಥ